# ಪುಂಗವ

ಕನ್ನಡ ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





**ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಾಬ್ದಿಯ ನಿಮಿತ್ತ 'ಸಂಘದ ನೂರು ವರ್ಷದ ಪಯಣ: ನವಕ್ಷಿತಿಜ' ವಿಷಯದ ಕುರಿತು ಆರೆಸ್ಸೆಸ್ ಸರಸಂಘಚಾಲಕ ಡಾ|ಮೋಹನ್ ಭಾಗವತ್ ಅವರ ಎರಡು ದಿನಗಳ ಉಪನ್ಯಾಸಮಾಲೆ ನವೆಂಬರ್ 8-9, 2025ರಂದು ಬನಶಂಕರಿಯ ಹೊಸಕೆರೆಹಳ್ಳಿಯ ಪಿಇಎಸ್ ವಿಶ್ವವಿದ್ಯಾನಿಲಯದಲ್ಲಿ ನಡೆಯಿತು.


ಸಂಪುಟ : 47 | ಸಂಚಿಕೆ : 14 | ಮಾರ್ಗಶಿರ–ಪುಷ್ಯ | ಕಲಿಯುಗಾಬ್ದ 5127 | 01–12–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ರಾಷ್ಟ್ರೀಯ ಸ್ವಯಂಸೇವಕ ಸಂಘ: ಸಂಘಟನೆ ಮತ್ತು ಸೇವೆಗಳ 100 ವರ್ಷಗಳ ಯಾತ್ರೆ

# ಬನ್ನಿ, ಸಮರ್ಥ ಭಾರತವನ್ನು ನಿರ್ಮಿಸೋಣ

1925ರ ವಿಜಯದಶಮಿಯಂದು ಪ್ರಾರಂಭವಾದ ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ಸ್ಥಾಪನೆಯ 100 ವರ್ಷಗಳನ್ನು ಪೂರೈಸಿದೆ. ಸಂಘವು ಇಂದು ಜಗತ್ತಿನ ಅತಿದೊಡ್ಡ ಸಾಮಾಜಿಕ ಸಂಘಟನೆಯಾಗಿ ಬೆಳೆದಿದೆ. ಸಾವಿರಾರು ಜನರನ್ನು ಸೇವಾಕಾರ್ಯದಲ್ಲಿ ಹಾಗೂ ಸಮಾಜ ಪರಿವರ್ತನೆಯ ಚಟುವಟಿಕೆಗಳಲ್ಲಿ ತೊಡಗಿಸಿದೆ. ಹಾಗಾಗಿ ಸಂಘವನ್ನು ತಿಳಿಯಬೇಕೆಂಬ ಕುತೂಹಲ ಸಹಜವಾಗಿಯೇ ಸಮಾಜದಲ್ಲಿ ಹೆಚ್ಚಿದೆ.

ಸಂಘವನ್ನು ತಿಳಿಯಬೇಕಾದರೆ ಸಂಘದ ಸ್ಥಾಪಕರಾದ ಡಾ॥ ಕೇಶವ ಬಲಿರಾಮ ಹೆಡಗೇವಾರ್ ಅವರನ್ನು ತಿಳಿಯುವುದು ಅಗತ್ಯ. ಹುಟ್ಟಿನಿಂದಲೇ ದೇಶಭಕ್ತರಾಗಿದ್ದ ಹೆಡಗೇವಾರರು ಸ್ವಾತಂತ್ರ್ಯ ಹೋರಾಟದ ಅನೇಕ ವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿಯೇ ಪಾಲ್ಗೊಂಡಿದ್ದರು. ಈ ಕಾರಣದಿಂದಾಗಿ ಅವರು ಎರಡು ಬಾರಿ (1921 ಮತ್ತು 1930ರಲ್ಲಿ) ಜೈಲುವಾಸವನ್ನು ಅನುಭವಿಸಿದ್ದರು.

### ಸಂಘ ಸ್ಥಾಪನೆ

ನಮ್ಮ ದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಸಮಯದಲ್ಲಿ ಸಂಘದ ಸ್ಥಾಪನೆಯಾಯಿತು. ರಾಷ್ಟ್ರದ ಸ್ವಾತಂತ್ರ್ಯ, ಅದರ ನಂತರ ರಾಷ್ಟ್ರದ ಸರ್ವತೋಮುಖ ವಿಕಾಸ, ಸಮಾಜದ ವಿವಿಧ ಸಮಸ್ಯೆಗಳಿಗೆ ಶಾಶ್ವತ ಪರಿಹಾರ – ಇವೆಲ್ಲ ಇಲ್ಲಿನ ಹಿಂದು ಸಮಾಜವನ್ನು ಸಂಘಟಿಸುವುದರಿಂದ ಮಾತ್ರ ಸಾಧ್ಯ ಎಂಬುದು ಡಾ॥ ಹೆಡಗೇವಾರರ ಸ್ಪಷ್ಟ ಅಭಿಪ್ರಾಯವಾಗಿತ್ತು. ಜಾತಿ, ಭಾಷೆ, ಪ್ರಾಂತ ಇತ್ಯಾದಿ ಹೆಸರಿನಲ್ಲಿ ಹರಿದು ಹಂಚಿಹೋಗಿದ್ದ ಹಿಂದು ಸಮಾಜವನ್ನು 'ಹಿಂದುತ್ವ'ದ ಆಧಾರದ ಮೇಲೆ ಸಂಘಟಿಸುವ ದೃಢಸಂಕಲ್ಪವನ್ನು ಮಾಡಿ ಸಂಘವನ್ನು ಸ್ಥಾಪಿಸಿದರು.

ನಮ್ಮಲ್ಲಿ ಹಿಂದುತ್ವ ಎಂದರೆ ಯಾವುದೋ ಒಂದು ಪೂಜಾಪದ್ಧತಿ ಅಥವಾ ಮತ (Religion) ಅಲ್ಲ, ಅದೊಂದು ಜೀವನದೃಷ್ಟಿ ಮತ್ತು ಆ ದೃಷ್ಟಿಯ ಆಧಾರದ ಮೇಲೆ ಬೆಳೆದುನಿಂತ ಜೀವನ ಪದ್ಧತಿಯಾಗಿದೆ.

ಸಂಘಕಾರ್ಯವನ್ನು ರಾಷ್ಟ್ರವ್ಯಾಪಿಯಾಗಿ ಬೆಳೆಸಬೇಕಾದರೆ ಸಾವಿರಾರು ಸಂಖ್ಯೆಯಲ್ಲಿ ಗುಣವಂತ ಕಾರ್ಯಕರ್ತರು ಅವಶ್ಯಕ. ಅಂತಹ ಕಾರ್ಯಕರ್ತರನ್ನು ರೂಪಿಸಲು ಡಾ॥ ಹೆಡಗೇವಾರರು ಒಂದು ಸರಳವಾದ, ಆದರೆ ಅತ್ಯಂತ ಪರಿಣಾಮಕಾರಿಯಾದ ದೈನಂದಿನ ಶಾಖಾ ಪದ್ಧತಿಯನ್ನು ವಿಕಸಿತಗೊಳಿಸಿದರು.

### ವ್ಯಕ್ತಿ ನಿರ್ಮಾಣದ ಕಾರ್ಯಪದ್ಧತಿ

ನಮಗೆ ಅತ್ಯಂತ ಸಾಮಾನ್ಯವೆಂದು ಕಾಣುವ ಆಟ, ವ್ಯಾಯಾಮ, ಯೋಗಾಸನ, ಗೀತೆ, ಪ್ರಾರ್ಥನೆ ಮುಂತಾದ ಕಾರ್ಯಕ್ರಮಗಳು ದೈನಂದಿನ ಶಾಖೆಯಲ್ಲಿ ನಡೆಯುತ್ತವೆ. ಈ ಸರಳ ಕಾರ್ಯಕ್ರಮಗಳೇ ಸ್ವಯಂಸೇವಕರಲ್ಲಿ ಶಿಸ್ತು, ಧೈರ್ಯ, ದೇಶಭಕ್ತಿ, ಸೇವೆ, ಪ್ರಾಮಾಣಿಕತೆ ಮುಂತಾದ ಗುಣಗಳನ್ನು ಅರಳಿಸಿ ಬೆಳೆಸುತ್ತವೆ. ಈವರೆಗೆ ಸಾವಿರಾರು ಕಾರ್ಯಕರ್ತರು ದೇಶದಾದ್ಯಂತ ತಯಾರಾಗಿದ್ದುದು ಈ ಪದ್ಧತಿಯಿಂದಲೇ.

'ಈ ದೇಶ ನನ್ನದು, ಈ ಸಮಾಜ ನನ್ನದು. ನಾನು ಇದರ ಋಣವನ್ನು ತೀರಿಸಬೇಕು' ಎಂಬ ಸಂಸ್ಕಾರವನ್ನು ಜನಸಾಮಾನ್ಯರ ಅಂತಃಕರಣದಲ್ಲಿ ಅಂಕಿತಗೊಳಿಸುವಲ್ಲಿ ಶಾಖಾಪದ್ಧತಿ ಯಶಸ್ವಿಯಾಗಿದೆ. ಅದಕ್ಕಾಗಿಯೇ ಸಂಘವು ಸಾಮಾನ್ಯ ಜನರ ಅಸಾಮಾನ್ಯ ಸಂಘಟನೆಯಾಗಿದೆ. ಶಾಖೆಯಲ್ಲಿ ತಯಾರಾದ ಸ್ವಯಂಸೇವಕರ ನಡವಳಿಕೆಯ ಕಾರಣದಿಂದ 'ಸಂಘ ಅಂದರೆ ದೇಶಭಕ್ತಿ, ಶಿಸ್ತು, ನಿಸ್ವಾರ್ಥ ಸೇವೆ' ಎಂಬ ಭಾವ ಜನಮನದಲ್ಲಿ ಅಚ್ಚೊತ್ತಿದೆ.

### ಸಂಘಕಾರ್ಯದ ವಿಸ್ತಾರ

ಯಾವುದೇ ಶ್ರೇಷ್ಠ ಕಾರ್ಯವು ಅಪಹಾಸ್ಯ, ನಿರ್ಲಕ್ಷ್ಯ, ವಿರೋಧ ಮತ್ತು ಸ್ವೀಕಾರ ಎಂಬ 4 ಹಂತಗಳನ್ನು ದಾಟಬೇಕಾಗುತ್ತದೆ. ಅದೇ ರೀತಿ ಸಂಘವೂ ಈ ಎಲ್ಲ ಹಂತಗಳನ್ನು ದಾಟಿ ಸಮಾಜದ ವಿಶ್ವಾಸವನ್ನು ಗಳಿಸುವುದರಲ್ಲಿ ಯಶಸ್ವಿಯಾಗಿದೆ. ಇಂದು ಸಂಘಕಾರ್ಯವು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಮತ್ತು ಕಛ್‌ನಿಂದ ಅರುಣಾಚಲ ಪ್ರದೇಶದವರೆಗೆ ಭಾರತದ ಮೂಲೆಮೂಲೆಗೂ ತಲುಪಿದೆ.



ಇಂದು ಭಾರತದ ಬಹುತೇಕ ಎಲ್ಲ ಜಿಲ್ಲೆಗಳಿಗೂ ಸಂಘ ವ್ಯಾಪಿಸಿದೆ. ಒಟ್ಟು 6618 ತಾಲ್ಲೂಕುಗಳ ಪೈಕಿ 92% ತಾಲ್ಲೂಕುಗಳಲ್ಲಿ ಸಂಘದ ಚಟುವಟಿಕೆಗಳು ನಡೆಯುತ್ತಿವೆ. ದೇಶದ 51,740 ಸ್ಥಾನಗಳಲ್ಲಿ 83,129 ದೈನಂದಿನ ಶಾಖೆಗಳು ಮತ್ತು 26,460 ಸ್ಥಾನಗಳಲ್ಲಿ 32,147 ಸಾಪ್ತಾಹಿಕ ಮಿಲನ್‌ಗಳ ಮೂಲಕ ಸಂಘಕಾರ್ಯವು ದೇಶಾದ್ಯಂತ ವಿಸ್ತರಿಸಿದೆ. ಒಟ್ಟು ಶಾಖೆಗಳಲ್ಲಿ 59% ವಿದ್ಯಾರ್ಥಿಗಳ ಹಾಗೂ 41% ಉದ್ಯೋಗಿಗಳ ಶಾಖೆಗಳಾಗಿವೆ. ಒಟ್ಟಿನಲ್ಲಿ ಸಂಘದಷ್ಟು ವ್ಯಾಪಕವಾದ ಸಂಘಟನೆ ಭಾರತದಲ್ಲಿ ಇನ್ನೊಂದಿಲ್ಲ ಎಂದೇ ಹೇಳಬಹುದು.

### ಸೇವೆಗೆ ಸದಾ ಸಿದ್ಧ

> ಸಾವಿರ ವರ್ಷದಿಂದ ಅವಕಾಶವಂಚಿತ ಸಹೋದರರನ್ನು ಮೇಲೆತ್ತಬೇಕಲ್ಲ? ಇನ್ನೂ ಭೇದಭಾವ, ಅಸ್ಪೃಶ್ಯತೆ ಜೀವಂತವಾಗಿದೆ. ಅದು ಇಂದಿನ ಸಮಾಜದ ಕ್ರೂರ ವಾಸ್ತವ. ಮೀಸಲಾತಿ ಮುಂದುವರಿಯಲಿ, ಅಸಮಾನತೆ ಕೊನೆಗೊಳ್ಳಲಿ. ಹೃದಯವನ್ನು ಕುಬ್ಜವಾಗಿಸಿಕೊಳ್ಳುವುದು ಬೇಡ. ಮುಕ್ತ ಮನಸ್ಸಿನಿಂದ ಆಲೋಚಿಸಬೇಕಿದೆ.
>
> – ಡಾ॥ ಮೋಹನ್ ಭಾಗವತ್
> ಸರಸಂಘಚಾಲಕ
> ಆರೆಸ್ಸೆಸ್

ಯಾವುದೇ ನೈಸರ್ಗಿಕ ಅಥವಾ ಇತರ ದುರಂತಗಳು – ಭೂಕಂಪ, ನೆರೆ, ಬರಗಾಲ, ಅಗ್ನಿದುರಂತ, ವಿಮಾನ ದುರಂತ ಇತ್ಯಾದಿಗಳು ಸಂಭವಿಸಿದಾಗ ಅಲ್ಲಿ ಸಂತ್ರಸ್ತರ ನೆರವಿಗೆ ಮೊಟ್ಟಮೊದಲು ಧಾವಿಸುವವರು ಸಂಘದ ಸ್ವಯಂಸೇವಕರೇ. ಕೇವಲ ವಿಪತ್ತಿನ ಘಳಿಗೆಯಲ್ಲಿ ಅಷ್ಟೇ ಅಲ್ಲ, ಸಮಾಜದಲ್ಲಿ ಕಂಡುಬರುವ ಕೊರತೆ, ನೋವು, ಉಪೇಕ್ಷೆಗಳನ್ನು ಹೋಗಲಾಡಿಸಲು ಸ್ವಯಂಸೇವಕರು ನಿಯಮಿತವಾಗಿ ಅನೇಕ ಸೇವಾಕಾರ್ಯಗಳನ್ನು ಮಾಡುತ್ತಿದ್ದಾರೆ.

ಇಂದು ಸ್ವಯಂಸೇವಕರು ಸಮಾಜದ ಸಹಯೋಗದೊಂದಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶಿಕ್ಷಣ, ಸಂಸ್ಕಾರ, ಆರೋಗ್ಯ ಮತ್ತು ಸ್ವಾವಲಂಬನೆಯ ಕ್ಷೇತ್ರಗಳಲ್ಲಿ 1,29,000 ಕ್ಕೂ ಹೆಚ್ಚು ಸೇವಾಕಾರ್ಯಗಳನ್ನು ನಡೆಸುತ್ತಿದ್ದಾರೆ.

ಇದರ ಜೊತೆಗೆ, ಕೇವಲ ಸರ್ಕಾರ ಅಥವಾ ಆಡಳಿತವನ್ನು ಅವಲಂಬಿಸದೆ, ಗ್ರಾಮಸ್ಥರೇ ಒಗ್ಗೂಡಿ ತಮ್ಮ ಗ್ರಾಮದ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವಂತಾಗಬೇಕು ಎಂಬ ಉದ್ದೇಶದಿಂದ ಸ್ವಯಂಸೇವಕರು 'ಗ್ರಾಮವಿಕಾಸ'ದ ಕಾರ್ಯವನ್ನು ಮಾಡುತ್ತಿದ್ದಾರೆ. ಭಾರತೀಯ ತಳಿಯ ಹಸುಗಳ ಸಂರಕ್ಷಣೆ, ಸಂವರ್ಧನೆ, ತಳಿ ಸುಧಾರಣೆಯ ಜೊತೆಗೆ ಗೋಮಯ ಆಧಾರಿತ ಸಾವಯವ ಕೃಷಿಗಾಗಿ ರೈತರಿಗೆ ತರಬೇತಿ ಮತ್ತು ಪ್ರೋತ್ಸಾಹ ನೀಡುವ ದೃಷ್ಟಿಯಿಂದ 'ಗೋ ಸೇವೆ–ಗೋ ಸಂವರ್ಧನೆ'ಯ ಕಾರ್ಯವೂ ನಡೆಯುತ್ತಿದೆ.

### ಪಂಚ ಪರಿವರ್ತನೆ

ಈ ವರ್ಷದಿಂದ 5 ವಿಷಯಗಳ ಕುರಿತು ಜನಜಾಗೃತಿಗಾಗಿ ಸ್ವಯಂಸೇವಕರು ಸಮಾಜದ ಸಜ್ಜನಶಕ್ತಿಯ ಸಹಕಾರದೊಂದಿಗೆ ವಿಶೇಷ ಪ್ರಯತ್ನಗಳನ್ನು ಮಾಡಲಿದ್ದಾರೆ. ಇವುಗಳನ್ನು 'ಪಂಚ ಪರಿವರ್ತನೆ' ಎಂದು ಕರೆಯಲಾಗಿದೆ. ಆ 5 ವಿಷಯಗಳು ಈ ರೀತಿ ಇವೆ:

1. **ಸಾಮಾಜಿಕ ಸಾಮರಸ್ಯ :** ದುರದೃಷ್ಟವಶಾತ್, ಅನೇಕ ಶತಮಾನಗಳಿಂದ ನಮ್ಮದೇ ಸಮಾಜದ ಕೆಲವರ್ಗಗಳನ್ನು ಅಸ್ಪೃಶ್ಯರೆಂದು ಪರಿಗಣಿಸಿ, ಅವರನ್ನು ಎಲ್ಲ ಸೌಲಭ್ಯಗಳು ಮತ್ತು ಗೌರವದಿಂದ ವಂಚಿತರನ್ನಾಗಿ ಮಾಡಿರುವುದು ಅತ್ಯಂತ ಅಮಾನವೀಯ ಸಂಗತಿಯಾಗಿದೆ. ಅಸ್ಪೃಶ್ಯತೆ ನಮ್ಮ ಹಿಂದು ಸಮಾಜಕ್ಕೆ ಅಂಟಿರುವ ಘೋರ ಕಳಂಕವಾಗಿದೆ. ಈ ಅನ್ಯಾಯವನ್ನು ಹೋಗಲಾಡಿಸಿ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಸಾಮರಸ್ಯದ ಪ್ರಯತ್ನಗಳಿಗೆ ಎಲ್ಲರೂ ಬಲ ತುಂಬಬೇಕಾಗಿದೆ.

   ಅದಕ್ಕಾಗಿ, ನಮ್ಮ ಸ್ನೇಹಿತ ಮತ್ತು ಕುಟುಂಬ ವಲಯದಲ್ಲಿ ಎಲ್ಲ ಜಾತಿ ಸಮುದಾಯದ ಜನರನ್ನು ಸೇರಿಸಿಕೊಳ್ಳುವುದು, ನಮ್ಮ ಕುಟುಂಬದ ಕಾರ್ಯಕ್ರಮಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಅವರ ಕುಟುಂಬಗಳನ್ನು ಗೌರವಪೂರ್ವಕವಾಗಿ ಆಮಂತ್ರಿಸುವುದು, ನಮ್ಮ ಮನೆ ಅಥವಾ ನಾವು ಕೆಲಸ ಮಾಡುವ ಸ್ಥಾನದಲ್ಲಿ ಸೇವೆ ಮಾಡುತ್ತಿರುವ ಎಲ್ಲರ ಜೊತೆ ಆತ್ಮೀಯತೆಯ ವ್ಯವಹಾರ, ಆಗಾಗ್ಗೆ ಅವರ ಮನೆ ಭೇಟಿ, ಎಲ್ಲ ಜಾತಿಸಮುದಾಯಗಳ ಪ್ರಮುಖರು ಒಟ್ಟಿಗೆ ಕುಳಿತು ಸಾಮಾಜಿಕ ಸಮಸ್ಯೆ–ಸವಾಲುಗಳ ಬಗ್ಗೆ ಚರ್ಚಿಸುವುದು ಮತ್ತು ಅವುಗಳ ಪರಿಹಾರಕ್ಕೆ ಸಾಮೂಹಿಕ ಪ್ರಯತ್ನಗಳನ್ನು ಮಾಡುವುದು ಅಗತ್ಯವಾಗಿದೆ.

2. **ಪರಿಸರ ಸಂರಕ್ಷಣೆ :** ಈ ಪ್ರಕೃತಿಯು ನಮ್ಮೆಲ್ಲ ಜೀವಿಗಳ ತಾಯಿ. ಹೆಚ್ಚುತ್ತಿರುವ ಭೋಗಜೀವನದ ಪರಿಣಾಮವಾಗಿ ಪ್ರಕೃತಿಯ ಶೋಷಣೆ ನಿರಂತರ ನಡೆಯುತ್ತಿದೆ. ಪಾಶ್ಚಾತ್ಯ ಮಾನದಂಡಗಳ ಆಧಾರದ ಮೇಲೆ ನಡೆದ ಅಭಿವೃದ್ಧಿಯಿಂದಾಗಿ ಕೇವಲ 500 ವರ್ಷಗಳಲ್ಲಿ ಪರಿಸರದ ಸಮತೋಲನ ಹದಗೆಟ್ಟಿದೆ. ಅನ್ನ, ನೀರು, ಗಾಳಿ, ಭೂಮಿ ಎಲ್ಲವೂ ವಿಷಮಯವಾಗುತ್ತಿವೆ, ಮಾಲಿನ್ಯದ ಅಪಾಯ ಬಹಳಷ್ಟು ಹೆಚ್ಚಿದೆ.


   ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಮೂರು ಕೆಲಸವನ್ನು ನಾವೆಲ್ಲರೂ ಮಾಡಬಹುದು –

*3ನೇ ಪುಟಕ್ಕೆ...*

## ಸಂಸ್ಮರಣೆ

## ಪುಟ್ಟಣ್ಣ ಕಣಗಾಲ್ (ಡಿಸೆಂಬರ್ 1, 1933 - ಜೂನ್ 5, 1985)

ಡಿಸೆಂಬರ್ 1, 1933 ರಂದು ಜನಿಸಿದ ಪುಟ್ಟಣ್ಣ ಕಣಗಾಲ್ ಭಾರತೀಯ ಚಿತ್ರರಂಗ ಕಂಡ ಸಾರ್ವಕಾಲಿಕ ಅಗ್ರಗಣ್ಯ ನಿರ್ದೇಶಕರ ಸಾಲಿನಲ್ಲಿರುವವರು. ಮಹಿಳಾ ಪ್ರಧಾನ ಚಿತ್ರಗಳಿಗೆ ಹೆಸರುವಾಸಿಯಾದ ಕಣಗಾಲರದ್ದು ಅಲ್ಲಗಳೆಯಲಾಗದ ಅಳಿಸಲಾಗದ ಚಿತ್ರಾಭಿವ್ಯಕ್ತಿ. ಬರಿಯ ಕನ್ನಡವಷ್ಟೇ ಅಲ್ಲ ಭಾರತೀಯ ಚಿತ್ರಜಗತ್ತೇ ಮಹಿಳಾಕೇಂದ್ರಿತ ಚಲನಚಿತ್ರಗಳೆಡೆಗೆ ಇನ್ನೂ ತೆರೆದುಕೊಳ್ಳದ ಹೊತ್ತಿಗೆಲ್ಲ ಪುಟ್ಟಣ್ಣ ಸಾಮಾನ್ಯ ಪ್ರೇಕ್ಷಕರಾದಿಯಾಗಿ, ಸಿನೆಮಾಪಂಡಿತರೂ ಒಂದೇಸಮನಾಗಿ ಆಸ್ವಾದಿಸಿ ಮೆಚ್ಚುವಂತಹ ಶ್ರೇಷ್ಠ ಚಿತ್ರಗಳನ್ನು ತಯಾರಿಸಿ ಉಣಬಡಿಸಿದವರು.



ಗೆಜ್ಜೆ ಪೂಜೆ, ಬೆಳ್ಳಿಮೋಡ, ಶರಪಂಜರ, ಉಪಾಸನೆಯಂತಹ ಜಾಗತಿಕ ಶ್ರೇಷ್ಠಚಿತ್ರಗಳ ಮೂಲಕ ನಾಯಕಿ ಪ್ರಧಾನ ಚಿತ್ರಗಳು ಮುನ್ನೆಲೆಗೆ ಬರುವಂತೆ ಮಾಡಿದ್ದಲ್ಲದೆ ಒಂದು ತಲೆಮಾರಿನ ಪ್ರೇಕ್ಷಕರ ಚಿತ್ರ ರಸಾನುಭವವನ್ನೂ ಉನ್ನತಿಗೇರಿಸಿದವರು ಪುಟ್ಟಣ್ಣ. ಮಾನವೀಯ ಸಂಬಂಧಗಳು, ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ, ಮಾನಸಿಕ ಅಸ್ವಸ್ಥತೆಯಂತಹ ಸೂಕ್ಷ್ಮ ವಿಷಯಗಳನ್ನು ಬೆಳ್ಳಿಪರದೆಗೆ ತರುವಲ್ಲಿ ಘಟಾನುಘಟಿ ಎಂಟೆದೆಯ ನಿರ್ದೇಶಕರೂ ಹಿಂದೇಟು ಹಾಕುವ ಇಂದಿನ ಸಮಯದಲ್ಲೂ ಶರಪಂಜರ, ಧರ್ಮಸೆರೆ, ಧರಣಿ ಮಂಡಲ ಮಧ್ಯದೊಳಗೆ ಯಂತಹ ಗಂಭೀರ ಕಥಾನಕಗಳ ಮೂಲಕ ಸಾಮಾನ್ಯ ವೀಕ್ಷಕನಿಗೆ ತಲುಪಿದ್ದಲ್ಲದೆ ಸಿನೆಮಾ ಮಾಧ್ಯಮದ ಅನನ್ಯ ಶಕ್ತಿ ಪ್ರಭಾವಗಳನ್ನು ವಿಸ್ತರಿಸಿ ಹೊಸವ್ಯಾಖ್ಯಾನವನ್ನೇ ಬರೆದರು.

ಪುಟ್ಟಣ್ಣರ ಚಲನಚಿತ್ರಗಳು ಪ್ರಯೋಗಾತ್ಮತೆಗೂ ವಿಮರ್ಶಾ ಮನೋಭಾವಕ್ಕೂ ಪಂಥಾಹ್ವಾನ ನೀಡುವಂಥವು. 'ನಾಗರಹಾವು' (1972) ಮತ್ತು 'ರಂಗನಾಯಕಿ' (1981), 'ಎಡಕಲ್ಲು ಗುಡ್ಡದ ಮೇಲೆ' ಯಂತಹ ಚಲನಚಿತ್ರಗಳು ಸಂಕೀರ್ಣ ಸಾಮಾಜಿಕ ಹಾಗು ವ್ಯಕ್ತಿಕೇಂದ್ರಿತ ವಿಷಯವಸ್ತುಗಳನ್ನು ಮುಖ್ಯಧಾರೆಯಲ್ಲಿ ನಿರ್ಭಿಡೆಯಾಗಿ ಸಂವಾದಕ್ಕೆ ಒದಗುವಂತೆ ಮಾಡಿದವು. ಹಾಗೆಂದು ಅವುಗಳ ಪ್ರಸ್ತುತಿಯಲ್ಲಾಗಲಿ ಬಳಕೆಯ ತಂತ್ರಗಾಂಭೀರ್ಯದಲ್ಲಾಗಲಿ ಕುಂದಾಗದಂತೆಯೂ ಚಿತ್ರಿಸಿದವು. ಈ ವಿಷಯಗಳನ್ನು ಪಾತ್ರಗಳ ಮೂಲಕ ಮೂರ್ತವಾಗಿಸಿದ ಕಲಾವಿದರೆಲ್ಲರಿಗೂ ಅಚ್ಚಳಿಯದ ಖ್ಯಾತಿಯನ್ನೂ ಗಳಿಸಿಕೊಟ್ಟವು.

ಕಣಗಾಲರ ಚಿತ್ರಶೈಲಿಗೆ ನಿರೂಪಣೆಯ ಸಂವಿಧಾನಗಳಿಗೆ ಸಮಾನಾಂತರ ಚಿತ್ರಜಗತ್ತಿನ ಜಾಗತಿಕ ದಿಗ್ಗಜರ ಜತೆ ಉಲ್ಲೇಖಗಳು ಬಂದಿರುವಲ್ಲಿ ಅಚ್ಚರಿಯೇನೂ ಇಲ್ಲ. ಅವರ ಶೈಲಿಯನ್ನು ಇಂಗ್ಮರ್ ಬರ್ಗ್‌ಮನ್ ಮತ್ತು ಫೆಡೆರಿಕೊ ಫೆಲಿನಿ ಅವರಂತಹ ನಿರ್ದೇಶಕರ ಚಿತ್ರಗಳಿಗೆ ಹೋಲಿಸಲಾಗಿದೆ. ಅವರ ಸಿನಿಮಾ ವಿಧಾನ ಭಾರತದ ಕಲಾತ್ಮಕ ಸಿನಿಮಾ ಚಳವಳಿಯೊಡನೆಯೂ ಹೋಲಿಕೆಯನ್ನು ಗಳಿಸಿದೆ.

ಕಣಗಾಲರ ಚಿತ್ರಪರಂಪರೆ ಕಥನಾ ವಿನ್ಯಾಸಗಳ ಸಾಮರ್ಥ್ಯ ಮತ್ತು ಪಾತ್ರಗಳ ಸಶಕ್ತ ಸಾಕಾರಕ್ಕೆ ಅವರು ಬಳಸಿದ ಕಾರ್ಯಪದ್ಧತಿ ಅವುಗಳ ಪೋಷಣಾ ನಾವಿನ್ಯತೆಗಳಿಗಾಗಿ ಪ್ರಪಂಚದಾದ್ಯಂತದ ಚಲನಚಿತ್ರ ವೀಕ್ಷಕರು ಹಾಗೂ ನಿರ್ದೇಶಕರನ್ನು ಆಕರ್ಷಿಸುತ್ತವೆ. ಪುಟ್ಟಣ್ಣ ತಮ್ಮ ಕಲೆ – ಪ್ರತಿಭೆಗಳಿಗೆ ತೋರಿದ ಬದ್ಧತೆಯನ್ನೇ ಸಾಮಾಜಿಕ ಸಾಂಸ್ಕೃತಿಕ ಕಾರಣಗಳಿಗೂ ತೋರುತ್ತಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಉಜ್ವಲ ರಾಷ್ಟ್ರಭಕ್ತಿಗೆ ಮಾರುಹೋಗಿದ್ದ ಅವರು ಸ್ವತಃ ಸಂಘದ ನಿಕ್ಕರ್ ತೊಟ್ಟು ಕೈಯಲ್ಲಿ ಲಾಠಿ ಹಿಡಿದು ಸಂಘದ ಪಥಸಂಚಲನದಲ್ಲಿ ಭಾಗವಹಿಸಿದ್ದನ್ನು ಹತ್ತಿರದಿಂದ ಬಲ್ಲವರು ಇಂದಿಗೂ ನೆನೆಸುತ್ತಾರೆ.

## ಯುವಕರ ಶ್ರಮದ ಸಾರ್ಥಕತೆಯನ್ನು ಸಾರುತ್ತಿವೆ ಗ್ರಾಮದ ಬದಲಾವಣೆಯ ಕಥೆಗಳು

ಯುವಕರ ಶ್ರಮದ ಸಾರ್ಥಕತೆಯನ್ನು ಸಾರುತ್ತಿವೆ ಗ್ರಾಮದ ಬದಲಾವಣೆಯ ಕಥೆಗಳು ಒಂದು ಕಾಲದಲ್ಲಿ ರಾಜಕೀಯ ದ್ವೇಷದ ನೆಲೆಯಾಗಿದ್ದ ಹರಿಯಾಣದ ರೋಹ್ತಕ್ ಜಿಲ್ಲೆಯ ಆನಂದಪುರ ಭಾಲಿ ಎಂಬ ಗ್ರಾಮವು ಇಂದು ಕೆಲವು ಯುವಕರ ಸಾರ್ಥಕ ಪ್ರಯತ್ನದ ಫಲವಾಗಿ ಹಳ್ಳಿಯ ಚಿತ್ರಣವೇ ಬದಲಾಗಿದೆ. ಗ್ರಾಮದ ಮಧ್ಯದಲ್ಲಿ ನಿರ್ಮಿಸಲಾದ ಮೂರು ಅಂತಸ್ತಿನ ಕೇಶವ ಭವನ ಮತ್ತು ಅದರಲ್ಲಿ ನಡೆಯುತ್ತಿರುವ ತಕ್ಷಶಿಲಾ ವಿದ್ಯಾ ಮಂದಿರ, ಆರ್ಯಭಟ್ಟ ಅಧ್ಯಯನ ಕೇಂದ್ರ, ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್ ಅಥವಾ ಹುತಾತ್ಮ ಪೈಲಟ್ ಸಂದೀಪ್ ಪಲಡವಾಲ್ ಗ್ರಂಥಾಲಯ ಇವು ಗ್ರಾಮದಲ್ಲಿನ ಬದಲಾವಣೆಯ ಕಥೆಯನ್ನು ಹೇಳುತ್ತಿವೆ. ಭಾಲಿ ಆನಂದಪುರದ ಈ ಹೊಸ ರೂಪದ ಯಶಸ್ಸು ಹರಿಯಾಣ ಪ್ರಾಂತದ, ಪ್ರಾಂತ ಸಹಗ್ರಾಮ ವಿಕಾಸ ಪ್ರಮುಖ್ ಅನೂಪ್ ಸಿಂಗ್ ಮತ್ತು ಅವರ ಸಹಕಾರಿಗಳಿಗೆ ಸಲ್ಲುತ್ತದೆ. ಈ ಯುವಕರಿಗೆ ಸಂಘದಿಂದ ಮತ್ತು ಸೇವಾಭಾರತಿಯಿಂದ ದೊರೆತ ಪ್ರೇರಣೆ ಈ ಬದಲಾವಣೆಯ ಗಾಳಿ ಬೀಸಲು ಕಾರಣವಾಗಿದೆ. ಹಳ್ಳಿಯ ಬಯಲುಗಳಲ್ಲಿ ಹಿರಿಯರಿಗೆ ಪತ್ರಿಕೆ ಹಂಚುವ ಮೂಲಕ ಪ್ರಾರಂಭಿಸಿದ ಸೇವಾ ಪ್ರಯಾಣಕ್ಕೆ ಹೊಸ ಆಯಾಮಗಳು ಸೇರುತ್ತಾ ಹೋಯಿತು ಮತ್ತು 'ಶಹೀದ್ ಚಂದ್ರಶೇಖರ್ ಆಜಾದ್ ಸೇವಾ ಸಮಿತಿ' ಜನ್ಮ ತಾಳಿತು.

ಇಲ್ಲಿನ ತಕ್ಷಶಿಲಾ ಅಧ್ಯಯನ ಕೇಂದ್ರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿದ ಗ್ರಾಮದ 48 ಯುವಕರು ಇಂದು ಸರ್ಕಾರಿ ಕೆಲಸಗಳನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯ ಸೇವಾಭಾರತಿಗೆ ಸಂಬಂಧಿಸಿದ ಈ ಸಂಸ್ಥೆಯ ಯಶಸ್ಸನ್ನು ನಾವು ಇದರಿಂದಲೇ ತಿಳಿಯಬಹುದು. ಹರಿಯಾಣದ ಹೆಣ್ಣುಮಕ್ಕಳು, ಕುಸ್ತಿಯಿಂದ ಹಿಡಿದು ಅಥ್ಲೆಟಿಕ್ಸ್‌ವರೆಗೆ ತಮ್ಮ ವಿಜಯ ಪತಾಕೆಯನ್ನು ದೇಶದೆಲ್ಲೆಡೆ ಹಾರಿಸಿದ್ದಾರೆ. ಆದ್ದರಿಂದ ಭಾಲಿ ಆನಂದಪುರದ ಹೆಣ್ಣುಮಕ್ಕಳು ದುರ್ಗಾ ಕ್ರೀಡಾ ಕೇಂದ್ರದಲ್ಲಿ ತರಬೇತುದಾರರ ಮೇಲ್ವಿಚಾರಣೆಯಲ್ಲಿ ಫುಟ್ಬಾಲ್ ಮತ್ತು ಇತರ ಕ್ರೀಡೆಗಳನ್ನು ನಿಯಮಿತವಾಗಿ ಅಭ್ಯಾಸ ಮಾಡುತ್ತಿರುವುದರ ಪರಿಣಾಮವಾಗಿ 5 ಬಾಲಕಿಯರು ರಾಷ್ಟ್ರೀಯ ತಂಡದಲ್ಲಿ ಆಡುತ್ತಿದ್ದಾರೆ. ಪ್ರಾಂತ ಸೇವಾ ಪ್ರಮುಖ್ ಕೃಷ್ಣಕುಮಾರ್ ಗ್ರಾಮದ ಅಗತ್ಯತೆಗೆ ತಕ್ಕಂತೆ ಸೇವೆಯ ಹೊಸ ಆಯಾಮಗಳನ್ನು ಜೋಡಿಸುತ್ತಾ ಹೋದರು.

3ನೇ ತರಗತಿಯಿಂದ ಹನ್ನೆರಡನೇ ತರಗತಿಯ ಮಕ್ಕಳಿಗಾಗಿ, ವಿವೇಕಾನಂದ ಸಂಸ್ಕಾರ ಕೇಂದ್ರವನ್ನು 6ವರ್ಷಗಳಿಂದ ನಡೆಸಿಕೊಂಡ



ಬರಲಾಗುತ್ತಿತ್ತು. ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಅಧ್ಯಯನ ಮಾಡಲು ಹವಾನಿಯಂತ್ರಿತ ಸಭಾಂಗಣವನ್ನು ನಿರ್ಮಿಸಲಾಯಿತು. ಅಲ್ಲಿಗೆ ಹತ್ತಿರದ ಗ್ರಾಮಗಳಾದ ಗಡ್ಡಿ, ಖೇಡಿ, ಬನಿಯಾನಿ ಮತ್ತು ದೋಬ್ರಿಂದ ಯುವಕರು ಬಂದು ಓದುತ್ತಿದ್ದಾರೆ. ಶಹೀದ್ ಪೈಲಟ್ ಸಂದೀಪ ಪಲಡವಾಲ್ ಗ್ರಂಥಾಲಯದಲ್ಲಿ 5000 ಪುಸ್ತಕಗಳ ಭಂಡಾರ ಗ್ರಾಮದ ವಿದ್ಯಾರ್ಥಿಗಳಿಗೆ ಪುಸ್ತಕ–ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ನಿಯತಕಾಲಿಕೆಗಳನ್ನು ಗ್ರಂಥಾಲಯಗಳಿಗೆ ತರಿಸಲಾಗುತ್ತಿದೆ. ಯುವಕರು, ವಯಸ್ಕರು ಮತ್ತು ಮಹಿಳೆಯರಿಗಾಗಿ ಹಲವಾರು ವರ್ಷಗಳಿಂದ ನಡೆಯುತ್ತಿರುವ ಸಂಘ ಮತ್ತು ಸಮಿತಿಯ ಶಾಖೆಯು ಗ್ರಾಮದಲ್ಲಿ ಸಾಮರಸ್ಯ ಮತ್ತು ಅಭಿವೃದ್ಧಿಯ ಹೊಸ ಕಥೆಯನ್ನು ಬರೆದಿದೆ. ಜನವರಿ 2013 ರಂದು ಶಹೀದ್ ಸಬ್ ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್‌ನ್ನು ಪ್ರಾರಂಭಿಸಿದಾಗ, ಕೆಲವು ಕಂಪ್ಯೂಟರ್‌ಗಳನ್ನು ಸೇವಾಭಾರತಿಯಿಂದ ಮತ್ತು ಕೆಲವು ಗ್ರಾಮದ ಜನರೇ ನೀಡಿದರು. ಕೇಶವ ಭವನಕ್ಕೆ ಭೂಮಿಯನ್ನು ಸಹ ಪಂಚಾಯತಿಯ ಸಮಿತಿಗೆ ನೀಡಿತು. ಸಾವಯವ ಕೃಷಿಯನ್ನು ಉತ್ತೇಜಿಸಲು, ಬಲರಾಮ್ ಕಿಸಾನ್ ಸೇವಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇದರ ಮೂಲಕ ಮನೆಮನೆಗಳಲ್ಲಿ ಸಾವಯವ ಗೊಬ್ಬರ ತಯಾರಿಸಲು ಗ್ರಾಮದಲ್ಲಿ ತರಬೇತಿ ನೀಡಲಾಗುತ್ತಿದೆ. ಮಹಿಳೆಯರಿಗಾಗಿ ನಡೆಯುತ್ತಿವ ರಾಣಿ ಲಕ್ಷ್ಮೀಬಾಯಿ ಹೊಲಿಗೆ ಕೇಂದ್ರದ ವಿಶೇಷತೆಯೆಂದರೆ, ಒಂದು ಬ್ಯಾಚ್ ಪೂರ್ಣಗೊಂಡ ನಂತರ ಅದು ಹಳ್ಳಿಯ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುತ್ತದೆ.

ಇದರಿಂದಾಗಿ ಅಲ್ಲಿನ ಮಹಿಳೆಯರು ಸುಲಭವಾಗಿ ಹೊಲಿಗೆ ಕಲಿಯಬಹುದು. ಸೇವೆ ಪಡೆದವರಲ್ಲಿ ಸೇವಾ ಭಾವದ ಜಾಗೃತಿ ಮಾಡುವುದು ಸಂಘದ ಮೂಲ ಮಂತ್ರ. ಅದನ್ನು ನಾವು ಭಾಲಿ ಆನಂದಪುರದಲ್ಲಿ ನೋಡಬಹುದು. ಎಲ್ಲಾ ಯುವಕರೂ ಸಹ ಗ್ರಾಮದಲ್ಲಿ ನಡೆಯುತ್ತಿರುವ ಈ ಸೇವಾ ಕಾರ್ಯಗಳಿಗೆ ಸಮಯವನ್ನು ನೀಡುತ್ತಾರೆ. ಜಲ ಸಂರಕ್ಷಣೆಯಿಂದ ಹಿಡಿದು ವೃಕ್ಷಾರೋಪಣದವರೆಗೆ ಪ್ರತಿಯೊಂದು ಚಟುವಟಿಕೆಯಲ್ಲೂ ಗ್ರಾಮಸ್ಥರ ಸಂಪೂರ್ಣ ಬೆಂಬಲ ದೊರೆಯುತ್ತದೆ ಎಂದು ಈ ಸೇವಾಕಾರ್ಯಗಳ ಸೂತ್ರಧಾರ ಅನೂಪ್ ಹೇಳುತ್ತಾರೆ. ಕಳೆದ 5 ವರ್ಷಗಳಿಂದ ನಡೆಯುತ್ತಿರುವ ಗ್ರಾಮೋತ್ಸವವು ವಿವಿಧ ಬಣಗಳ ನಡುವೆ ವಿಭಜನೆಯಾಗಿರುವ ಭಾಲಿ ಆನಂದಪುರವನ್ನು ಒಂದುಗೂಡಿಸಿದೆ ಎಂದು ಅವರು ಹೇಳುತ್ತಾರೆ.


ಸಂಪರ್ಕ: ಅನೂಪ್ ಸಿಂಗ್ – 9034729351

## ಪುಸ್ತಕ ಪರಿಚಯ

## ಎತ್ತರೆತ್ತರ ಭೈರಪ್ಪ

**ಲೇಖಕ:** ದೀಕ್ಷಿತ್ ನಾಯರ್
**ಪ್ರಕಾಶನ:** ಸ್ನೇಹ ಬುಕ್ ಹೌಸ್
**ಬೆಲೆ:** 175ರೂ

ಎಸ್ ಎಲ್ ಭೈರಪ್ಪ ಅವರು ಅತಿಹೆಚ್ಚು ಓದಿಸಿಕೊಂಡ ಮತ್ತು ಅಪಾರ ಓದುಗರನ್ನು ಸಂಪಾದಿಸಿದ ಅಪರೂಪದ ಲೇಖಕರು. ಅವರ ಹಾಗೆ ಬರೆದ ಮತ್ತು ಜಗತ್ತನ್ನು ಸುತ್ತಿದ ಲೇಖಕ ಕನ್ನಡದ ಮಟ್ಟಿಗಂತೂ ಅಪರೂಪವೇ ಸರಿ. ಅವರು ಅಖಿಲ ಭಾರತೀಯ ಸ್ತರದ ಲೇಖಕ. ಅಷ್ಟೇ ಅಲ್ಲ; ವಿಶ್ವಮಾನ್ಯ ಲೇಖಕರೂ ಹೌದು. ಅವರ ಕೃತಿಗಳು ನಲವತ್ತಕ್ಕೂ ಹೆಚ್ಚು ಭಾಷೆ ಮತ್ತು ಉಪಭಾಷೆಗಳಿಗೆ ಅನುವಾದಗೊಂಡಿವೆ.




ಅವರ ಕುರಿತಾದ ಈ ಕೃತಿಯಲ್ಲಿ ಡಾ. ಎಸ್.ಎಲ್. ಭೈರಪ್ಪನವರ ಬದುಕಿನ ಅಪರೂಪದ ಪ್ರಸಂಗಗಳಿವೆ. ಹೆಚ್ಚಿನವರಿಗೆ ಗೊತ್ತಿರದ ಸಂಗತಿಗಳಿವೆ. ವಿರೋಧಿಗಳೂ ಮೆಚ್ಚಿಕೊಳ್ಳುವಂಥ ಭೈರಪ್ಪನವರ ಖಾಸಗಿ ಬದುಕಿನ ವಿಷಯಗಳನ್ನು ಇಲ್ಲಿ ದಾಖಲಿಸಲಾಗಿದೆ. ಇದು 'ಎತ್ತರೆತ್ತರ ಭೈರಪ್ಪ: ಅಗೆದಷ್ಟೂ ಆಳ ಮೊಗೆದಷ್ಟೂ ಬೆರಗು!' ಇಲ್ಲಿ ದಾಖಲಾಗಿರುವ ಯಾವ ಪ್ರಸಂಗವೂ ಕಪೋಲಕಲ್ಪಿತವಲ್ಲ. ದಂತಕತೆಯೂ ಅಲ್ಲ. ನೋಡಿ–ಕೇಳಿ–ಓದಿ ಮತ್ತು ಕಂಡವರಿಂದ ತಿಳಿದು ಹೆಕ್ಕಿ ಅಕ್ಷರ ರೂಪಕ್ಕಿಳಿಸಿದ ಪ್ರಸಂಗಗಳು. ಇದು 'ಗ್ಲೋಬಲ್ ಸ್ಟಾರ್' ಲೇಖಕನೊಬ್ಬನ ಕುರಿತಾದ ಬೊಗಸೆ ಗಾತ್ರದ ಕೈಪಿಡಿ ಎಂದು ಲೇಖಕರು ತಿಳಿಸುತ್ತಾರೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 9845031335

## ಆಸ್ಪತ್ರೆಗಳಲ್ಲಿ ಶಿಸ್ತು ಪಾಲಿಸೋಣ

ನಾಗರಿಕ ಶಿಷ್ಟಾಚಾರ

ಆಸ್ಪತ್ರೆಗಳಲ್ಲಿ ಚಿಕಿತ್ಸೆಯಲ್ಲಿರುವ ಬಂಧುಗಳನ್ನು ಭೇಟಿ ಮಾಡುವ ವೇಳೆ ಅಲ್ಲಿನ ಶಿಸ್ತು–ಸಂಯಮ ಪಾಲಿಸೋಣ. ಯಾವುದೇ ಗೊಂದಲಗಳಿಗೆ ಎಡೆ ಮಾಡಿಕೊಡದಂತೆ ನಮ್ಮ ನಡುವಳಿಕೆ ಇರಲಿ. ನಮ್ಮ ನುಡಿ ಮತ್ತು ನಡೆ ಅಲ್ಲಿಗೆ ಹೊಂದುವಂತೆ ಎಚ್ಚರಿಕೆ ವಹಿಸಬೇಕು. ಆಸ್ಪತ್ರೆಯ ಆವರಣದಲ್ಲಿ ನಾವು ಸ್ವಚ್ಛತೆಗೆ ಮಹತ್ವವನ್ನು ನೀಡಬೇಕು.




ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ರೂಪಶ್ರೀ ನಾಗರಾಜ್

## 16,000 ಅಡಿ ಎತ್ತರದಲ್ಲಿ ಮೋನೋ ರೈಲು ವ್ಯವಸ್ಥೆ ಅಳವಡಿಸಿದ ಭಾರತೀಯ ಸೇನೆ



ಭಾರತೀಯ ಸೇನೆಯ ಗಜರಾಜ್ ಕಾರ್ಪ್ಸ್ ಅರುಣಾಚಲ ಪ್ರದೇಶದ ಕಾಮೆಂಗ್ ಹಿಮಾಲಯದಲ್ಲಿ 16,000 ಅಡಿ ಎತ್ತರದಲ್ಲಿ ಸ್ಥಳೀಯ ಮೊನೋ ರೈಲು ವ್ಯವಸ್ಥೆಯನ್ನು ಅಳವಡಿಸಿದೆ, ಇದು ಎತ್ತರದ ಪ್ರದೇಶಗಳಿಗೆ ಸರಕು ಪೂರೈಕೆಯನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ಮಹತ್ವದ ಸಾಧನೆ ಎಂದು ರಕ್ಷಣಾ ವಕ್ತಾರರು ಬಣ್ಣಿಸಿದ್ದಾರೆ. ಈ ವ್ಯವಸ್ಥೆಯು ಹಿಮ, ತೀವ್ರ ಭೂಪ್ರದೇಶ ಮತ್ತು ಅನಿರೀಕ್ಷಿತ ಹವಾಮಾನದಿಂದ ನಿಯಮಿತವಾಗಿ ಕಡಿತಗೊಳ್ಳುವ ಫಾರ್ವರ್ಡ್ ಪೋಸ್ಟ್‌ಗಳಿಗೆ ನಿರಂತರ ಸರಕು ಪೂರೈಕೆಯನ್ನು ಖಚಿತಪಡಿಸಲಿದೆ. ಈ ಪ್ರದೇಶದಲ್ಲಿ ಸೈನಿಕರು ಎದುರಿಸುತ್ತಿರುವ ಅತ್ಯಂತ ಕಠಿಣ ಕಾರ್ಯಾಚರಣೆಯ ಸವಾಲುಗಳಲ್ಲಿ ಒಂದನ್ನು ಪರಿಹರಿಸಲು ಈ ವ್ಯವಸ್ಥೆಯನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲಾಗಿದೆ, ವಿನ್ಯಾಸಗೊಳಿಸಲಾಗಿದೆ ಮತ್ತು ನಿಯೋಜಿಸಲಾಗಿದೆ ಎಂದು ರಕ್ಷಣಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಮಹೇಂದ್ರ ರಾವತ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## 2.2 ಮಿಲಿಯನ್ ಟನ್ ಎಲ್‌ಪಿಜಿ ಆಮದಿಗೆ ಭಾರತ–ಯುಎಸ್ ಒಂದು ವರ್ಷದ ಒಪ್ಪಂದ

ಭಾರತ ಮತ್ತು ಅಮೇರಿಕಾ ನಡುವೆ ಮೊದಲ ಬಾರಿಗೆ ನಡೆದ ಐತಿಹಾಸಿಕ ತೈಲ ಆಮದು ಒಪ್ಪಂದ ರಾಜತಾಂತ್ರಿಕವಾಗಿ ಮನ್ನಣೆ ಪಡೆದಿದೆ. ಭಾರತೀಯ ಸಾರ್ವಜನಿಕ ವಲಯದ ತೈಲ ಕಂಪನಿಗಳು ಅಮೇರಿಕಾದಿಂದ ದ್ರವೀಕೃತ ಪೆಟ್ರೋಲಿಯಂ ಅನಿಲ (LPG) ಆಮದು ಮಾಡಿಕೊಳ್ಳಲು ಒಂದು ವರ್ಷದ ಒಪ್ಪಂದಕ್ಕೆ ಸಹಿ ಹಾಕಿವೆ.

# ಸಾಲುದ್ದದ ಸುದ್ದಿಗಳು




ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, ಕಂಪನಿಗಳು ವರ್ಷಕ್ಕೆ ಸುಮಾರು 2.2 ಮಿಲಿಯನ್ ಟನ್ LPG ಅನ್ನು ಆಮದು ಮಾಡಿಕೊಳ್ಳಲಿವೆ. ಇದನ್ನು ಯುಎಸ್ ಗಲ್ಫ್ ಕೋಸ್ಟ್‌ನಿಂದ ಪಡೆಯಲಾಗುವುದು. ನಾಗರಿಕರಿಗೆ ಸುರಕ್ಷಿತ, ಕೈಗೆಟುಕುವ LPG ಪೂರೈಕೆಗಳನ್ನು ಒದಗಿಸಲು ಸರ್ಕಾರವು ತನ್ನ LPG ಮೂಲವನ್ನು ವೈವಿಧ್ಯಗೊಳಿಸುತ್ತಿದೆ ಎಂದು ಹೇಳಿದರು. ಈ ಒಪ್ಪಂದವನ್ನು 'ಹಿಸ್ಟಾರಿಕಲ್ ಫಸ್ಟ್' ಎಂದು ಬಣ್ಣಿಸಲಾಗಿದೆ. ಅಮೇರಿಕದಿಂದ ಭಾರತ ಸರಬರಾಜು ಮಾಡಿಕೊಳ್ಳುವ ಎಲ್‌ಪಿಜಿ ಭಾರತದ ಒಟ್ಟಾರೆ ಎಲ್‌ಪಿಜಿ ಆಮದಿನಲ್ಲಿ ಶೇ. 10ರಷ್ಟಾಗುತ್ತದೆ.

## ರಫ್ತುದಾರರಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆ ಅನುಮೋದಿಸಿದ ಕೇಂದ್ರ ಸಂಪುಟ

ಭಾರತದ ರಫ್ತು ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಕ್ರಮದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ರಫ್ತುದಾರರಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆ (CGSE)ಗೆ ಅನುಮೋದನೆ ನೀಡಿದೆ. ಈ ಯೋಜನೆಯು MSME ವಲಯದವರು ಸೇರಿದಂತೆ ಅರ್ಹ ರಫ್ತುದಾರರಿಗೆ 20,000 ಕೋಟಿ ರೂ.ಗಳವರೆಗೆ ಮೇಲಾಧಾರ–ಮುಕ್ತ ಸಾಲ ಬೆಂಬಲವನ್ನು ಒದಗಿಸುವ ಗುರಿಯನ್ನು ಹೊಂದಿದೆ, ಜೊತೆಗೆ ರಾಷ್ಟ್ರೀಯ ಕ್ರೆಡಿಟ್ ಗ್ಯಾರಂಟಿ ಟ್ರಸ್ಟಿ ಕಂಪನಿ ಲಿಮಿಟೆಡ್ (NCGTC) ಮೂಲಕ 100% ಗ್ಯಾರಂಟಿ ವ್ಯಾಪ್ತಿಯನ್ನು ನೀಡಲಾಗುತ್ತದೆ.



## ಭಾರತಕ್ಕೆ SU–57 ಸ್ಟೆಲ್ತ್ ಫೈಟರ್ ಜೆಟ್ ತಂತ್ರಜ್ಞಾನ ವರ್ಗಾಯಿಸಲು ಸಿದ್ಧ ಎಂದ ರಷ್ಯಾ

ಐದನೇ ತಲೆಮಾರಿನ ಸ್ಟೆಲ್ತ್ ಫೈಟರ್ ವಿಮಾನವಾದ SU–57 ಗಾಗಿ ಭಾರತಕ್ಕೆ ಅನಿಯಂತ್ರಿತ ತಂತ್ರಜ್ಞಾನ ವರ್ಗಾವಣೆಯನ್ನು ನೀಡಲು ತಾನು ಸಿದ್ಧವಿರುವುದಾಗಿ ರಷ್ಯಾ ಹೇಳಿಕೊಂಡಿದೆ. ಇದು ಉಭಯ ದೇಶಗಳ ದ್ವಿಪಕ್ಷೀಯ ರಕ್ಷಣಾ ಸಂಬಂಧಗಳಲ್ಲಿ ಮಹತ್ವದ ಹೆಜ್ಜೆಯಾಗಿದೆ. ದುಬೈ ಏರ್ ಶೋನಲ್ಲಿ ರೋಸೊಬೊರೊನೆಕ್ಸ್‌ಪೋರ್ಟ್ ಮತ್ತು ಯುನೈಟೆಡ್ ಏರ್‌ಕ್ರಾಫ್ಟ್ ಕಾರ್ಪೊರೇಷನ್ (UAC) ಪ್ರತಿನಿಧಿಗಳು ಮಾಸ್ಕೋದ ಪ್ರಸ್ತಾವನೆಯನ್ನು ಭಾರತದ ಮುಂದೆ ಮಂಡಿಸಿದ್ದಾರೆ, ಈ ಪ್ರಸ್ತುತಿಯು ಪರವಾನಗಿ ಉತ್ಪಾದನೆ, ಭಾರತೀಯ ಶಸ್ತ್ರಾಸ್ತ್ರಗಳ ಏಕೀಕರಣ ಮತ್ತು ಉತ್ಪಾದನೆಯಲ್ಲಿ ಭಾರತಕ್ಕೆ ಬೆಂಬಲ ನೀಡುವುದನ್ನು ಒಳಗೊಂಡಿದೆ.

## ಆರು ತಿಂಗಳಲ್ಲಿ ದೇಶದಾದ್ಯಂತ 2,300 ಮಕ್ಕಳ ರಕ್ಷಣೆ: NCPCR

ಇಟಾನಗರ: ಕಳೆದ ಆರು ತಿಂಗಳಲ್ಲಿ ದೇಶದಾದ್ಯಂತ ಸುಮಾರು 26,000 ಪ್ರಕರಣಗಳನ್ನು ವಿಲೇವಾರಿ ಮಾಡಿ 2,300 ಕ್ಕೂ ಹೆಚ್ಚು ಮಕ್ಕಳನ್ನು ರಕ್ಷಿಸಲಾಗಿದೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (NCPCR) ಹೇಳಿದೆ. ರಕ್ಷಿಸಿದ ಮಕ್ಕಳ ಪೈಕಿ 1 ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಅವರ ತವರು ಜಿಲ್ಲೆಗೆ ವಾಪಸ್ ಕಳಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಜೊತೆಗೆ ಮಕ್ಕಳ ಹಕ್ಕುಗಳ ಬದ್ಧತೆಯನ್ನು ಅರಿತುಕೊಳ್ಳುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದಿದೆ.

*1ನೇ ಪುಟದಿಂದ...*

## ಬನ್ನಿ, ಸಮರ್ಥ ಭಾರತವನ್ನು ನಿರ್ಮಿಸೋಣ

I. ನೀರನ್ನು ಉಳಿಸುವುದು (ನೀರಿನ ಮಿತಬಳಕೆ)

II. ಗಿಡಗಳನ್ನು ನೆಡುವುದು

III. ಪ್ಲಾಸ್ಟಿಕ್ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು. (Single Use Plastic – ಏಕಬಳಕೆ ಪ್ಲಾಸ್ಟಿಕನ್ನು ಸಂಪೂರ್ಣ ತ್ಯಜಿಸುವುದು)

ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಅದನ್ನು ಸಂರಕ್ಷಿಸುವ ಚಟುವಟಿಕೆಗಳನ್ನು ಸಮಾಜದ ಸಹಭಾಗಿತ್ವದೊಂದಿಗೆ ವ್ಯಾಪಕವಾಗಿ ಮಾಡಬೇಕಾಗಿದೆ.

3. **ಕುಟುಂಬ ಪ್ರಬೋಧನ :** ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬಗಳ ಪಾತ್ರ ಅತ್ಯಂತ ಮಹತ್ವದ್ದು. ನಮ್ಮ ಸಂಸ್ಕೃತಿ, ಮೌಲ್ಯಗಳು ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿರುವುದು ಕುಟುಂಬ ವ್ಯವಸ್ಥೆಯ ಕಾರಣದಿಂದಲೇ.

ಇತ್ತೀಚಿನ ವರ್ಷಗಳಲ್ಲಿ ನಗರೀಕರಣ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ, ಬದಲಾಗುತ್ತಿರುವ ಜೀವನಶೈಲಿ ಇತ್ಯಾದಿ ಕಾರಣಗಳಿಂದ ಈ ಕುಟುಂಬ ವ್ಯವಸ್ಥೆ ದುರ್ಬಲಗೊಳ್ಳುತ್ತಿರುವುದು ಗಂಭೀರ ಚಿಂತೆಯ ವಿಷಯವಾಗಿದೆ.

ಆದ್ದರಿಂದ ಪ್ರತಿಯೊಂದು ಕುಟುಂಬದಲ್ಲೂ ಎಲ್ಲಾ ಸದಸ್ಯರು ಆಗಾಗ್ಗೆ ಒಟ್ಟಿಗೆ ಸೇರಿ ಮಾತುಕತೆ, ಭಜನೆ, ಸದ್ವಿಚಾರಗಳ ಬಗ್ಗೆ ಚರ್ಚೆ, ಒಟ್ಟಿಗೆ ಕೂತು ಭೋಜನ, ನೆರೆಕೆರೆಯ ಕೆಲ ಕುಟುಂಬಗಳ ಜತೆ ಸೇರಿ ಕುಟುಂಬ ಮಿಲನ್ (ಸತ್ಸಂಗ), ಅಲ್ಲಿ ಕುಟುಂಬದ ಉತ್ತಮ ಸಂಪ್ರದಾಯ–ರೂಢಿಗಳ ಬಗ್ಗೆ ವಿಚಾರ ವಿನಿಮಯ – ಈ ರೀತಿ ಕೌಟುಂಬಿಕ ಮೌಲ್ಯಗಳನ್ನು ಗಟ್ಟಿಗೊಳಿಸುವಂಥ ಚಟುವಟಿಕೆಗಳು ಹೆಚ್ಚೆಚ್ಚು ನಡೆಯುವಂತಾಗಬೇಕು.

4. **'ಸ್ವ' ಆಧಾರಿತ ಜೀವನ :** ಈ ಮಣ್ಣಿನ ವಿಚಾರ, ಮೌಲ್ಯಗಳು ಮತ್ತು ಸಂಪನ್ಮೂಲಗಳ ಆಧಾರದ ಮೇಲೆ ರಾಷ್ಟ್ರಜೀವನವನ್ನು ರೂಪಿಸಬೇಕು, ಆ ಮೂಲಕ ಭಾರತವು ಒಂದು ಸ್ವಾವಲಂಬಿ, ಬಲಿಷ್ಠ ರಾಷ್ಟ್ರವಾಗಿ ಎದ್ದು ನಿಲ್ಲುವಂತಾಗಬೇಕು. 'ಸ್ವ ಆಧಾರಿತ ಜೀವನ'ದ ತಾತ್ಪರ್ಯವಿದು. ಸ್ವದೇಶಿ




ಜೀವನಶೈಲಿಯನ್ನು ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಕುಟುಂಬವೂ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಭಾರತವು ಆತ್ಮನಿರ್ಭರವಾಗುತ್ತದೆ. ನಮ್ಮ ಮಾತೃಭಾಷೆ, ನಮ್ಮ ಉಡುಗೆ ತೊಡುಗೆ, ನಮ್ಮ ಸಂಸ್ಕೃತಿ ಪರಂಪರೆಗಳ ಬಗ್ಗೆ ಅಭಿಮಾನ ಇಟ್ಟುಕೊಂಡು ಜೀವನದಲ್ಲಿ ಅನುಸರಿಸಬೇಕು.

5. **ನಾಗರಿಕ ಕರ್ತವ್ಯಪ್ರಜ್ಞೆ :** ಸಂವಿಧಾನ, ಕಾನೂನು, ನಿಯಮ, ಶಿಸ್ತುಗಳನ್ನು ಎಲ್ಲರೂ ಎಲ್ಲ ಸಂದರ್ಭಗಳಲ್ಲೂ ಪಾಲಿಸಬೇಕು. ಯಾವುದೇ ಪ್ರಚೋದನಕಾರಿ ಘಟನೆ ನಡೆದಾಗಲೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ಕಾನೂನು ಬಾಹಿರವಾಗಿ ವರ್ತಿಸಬಾರದು. ಇಂದು ದೇಶಕ್ಕಾಗಿ 24 ಗಂಟೆ ಬದುಕುವ ಅವಶ್ಯಕತೆ ಇದೆ. ಸಣ್ಣಪುಟ್ಟ ವಿಷಯಗಳಲ್ಲೂ ಎಲ್ಲರ ಬಗ್ಗೆ, ದೇಶ ಮತ್ತು ಸಮಾಜದ ಬಗ್ಗೆ ಕಾಳಜಿ ಇರಬೇಕು.

'ಇದು ನನ್ನಿಂದಲೇ ಆರಂಭವಾಗಬೇಕು' ಎಂದು ಪ್ರತಿಯೊಬ್ಬರೂ ನಿಶ್ಚಯಿಸಿ ಕಾರ್ಯಪ್ರವೃತ್ತರಾಗಬೇಕು. ಆಗ ಇದು ನಮ್ಮಿಂದ ಸಮಾಜಕ್ಕೂ, ಆ ಮೂಲಕ ಇಡೀ ದೇಶಕ್ಕೂ ವ್ಯಾಪಿಸುತ್ತದೆ.

### ಸಮಾಜ ಬಾಂಧವರಿಗೆ ಕರೆ

ಕಳೆದ ನೂರು ವರ್ಷಗಳಿಂದ ರಾಷ್ಟ್ರ ಪುನರ್ನಿರ್ಮಾಣದ ಈ ಮಹಾನ್ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಇಡೀ ಸಮಾಜವನ್ನು ಸಂಘಟಿಸಿ, ಆ ಮೂಲಕ ದೇಶ ಎದುರಿಸುತ್ತಿರುವ ಸಮಸ್ಯೆ–ಸವಾಲುಗಳಿಗೆ ಪರಿಹಾರ ಹುಡುಕುವುದು, ಸಮಾಜದಲ್ಲಿ ಸುಯೋಗ್ಯ ಬದಲಾವಣೆಗಳನ್ನು ತರಲು ಕಾಲಕ್ಕೆ ತಕ್ಕಂತೆ ಸಮಾಜದ ವ್ಯವಸ್ಥೆಗಳನ್ನು ರೂಪಿಸುವುದು ಸಂಘಕಾರ್ಯದ ಮುಂದಿನ ಹಂತವಾಗಿದೆ.

ನಮ್ಮದು ಬಹಳ ವಿಶಾಲವಾದ ದೇಶ. ಯಾವುದೇ ಒಂದೇ ಸಂಘಟನೆಯಿಂದ ಶಾಶ್ವತ ಬದಲಾವಣೆಯನ್ನು ತರಲು ಸಾಧ್ಯವಿಲ್ಲ. ಎಲ್ಲರೂ ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಟ್ಟಾಗಿ ಒಂದಾಗಿ ಕೆಲಸ ಮಾಡಿದರೆ ಮಾತ್ರ ಇದು ಸಾಧ್ಯವಾದೀತು. ಈ ರಾಷ್ಟ್ರಕಾರ್ಯದಲ್ಲಿ ಎಲ್ಲ ಸೋದರ ಸೋದರಿಯರು ತಮ್ಮ ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಸಕ್ರಿಯ ಪಾತ್ರ ವಹಿಸಬೇಕೆಂಬ ವಿನಂತಿ ನಮ್ಮದು. ತಾಯಿ ಭಾರತಿಯ ರಥವನ್ನು ಎಳೆಯಲು ಎಲ್ಲರ ಕೈಗಳು ಮತ್ತು ಶಕ್ತಿ ಸೇರಲಿ.

ಈ ಅಮೃತಕಾಲದಲ್ಲಿ ಎಲ್ಲರೂ ಸೇರಿ ನಮ್ಮ ಭಗೀರಥ ಪ್ರಯತ್ನದಿಂದ ಭಾರತಾಂಬೆಯನ್ನು ಪರಮವೈಭವದತ್ತ ಕೊಂಡೊಯ್ಯಲು ರಾಷ್ಟ್ರೀಯ ಸ್ವಯಂಸೇವಕ ಸಂಘ ಸಾರ್ವಜನಿಕರಿಗೆ ಕರೆ ನೀಡಿದೆ.



ನಮ್ಮ ಪ್ರದೇಶದ ಎಲ್ಲ ವರ್ಗಗಳಿಂದಲೂ ನಮಗೆ ಸ್ನೇಹಿತರಿರಬೇಕು. ನಮ್ಮ ಕುಟುಂಬದ ಸ್ನೇಹಿತ ವಲಯದಲ್ಲೂ ಎಲ್ಲರೂ ಇರಬೇಕು. ದೇವಾಲಯ, ನೀರು, ಸ್ಮಶಾನ ಇವು ಎಲ್ಲರಿಗೂ ಸಮಾನವಾಗಿರುವಂತೆ ಮಾಡಬೇಕು. ಇದನ್ನು ಸಂಘದ ಸ್ವಯಂಸೇವಕರೇ ಮಾಡಬೇಕೆಂದಿಲ್ಲ, ಎಲ್ಲರೂ ಮಾಡಬಹುದು. ಹೀಗೆ ಮಾಡಿದರೆ ಜಾತಿ ಸಮಸ್ಯೆಯನ್ನು ಬಹುಶಃ 10 ವರ್ಷಗಳಲ್ಲಿ ಹೋಗಲಾಡಿಸಬಹುದು. ಆದರೆ ಸಾವಿರ ವರ್ಷದಿಂದ ಪ್ರಯತ್ನಿಸಿದರೂ ಅಸ್ಪೃಶ್ಯತೆ, ಜಾತಿ ಹೋಗುತ್ತಿಲ್ಲ ಏಕೆಂದರೆ, ಕತ್ತಲೆಯನ್ನು ಕೋಲಿನಿಂದ ಓಡಿಸಲು ಸಾಧ್ಯವಿಲ್ಲ ಸಣ್ಣ ದೀಪ ಹಚ್ಚಿದರೆ ಸಾಕು.

**ಡಾ॥ ಮೋಹನ್ ಭಾಗವತ್**
ಸರಸಂಘಚಾಲಕ, ರಾಷ್ಟ್ರೀಯ ಸ್ವಯಂಸೇವಕ ಸಂಘ

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.vskkarnataka.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th NOVEMBER 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY KANNADA 01-12-2025



## ಬಳಕೆದಾರರ ವೈಯಕ್ತಿಕ ದತ್ತಾಂಶ ಇನ್ನಷ್ಟು ಭದ್ರ

ಭಾರತದ ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ (ಡಿಪಿಡಿಪಿ) ನಿಯಮಗಳು 2025 ಈಗ ಜಾರಿಯಾಗಿದ್ದು, ಬಳಕೆದಾರರ ಗೌಪ್ಯತೆ ಮತ್ತು ವೇದಿಕೆಯ ಹೊಣೆಗಾರಿಕೆಯಲ್ಲಿ ಒಂದು ಮಹತ್ವದ ಬದಲಾವಣೆಯನ್ನು ಇದು ಸೂಚಿಸುತ್ತದೆ. ವಾಟ್ಸಾಪ್, ಫೇಸ್ಬುಕ್, ಇನ್ಸ್ಟಾಗ್ರಾಮ್, ಅಮೆಜಾನ್ ಮತ್ತು ಬ್ಯಾಂಕಿಂಗ್ ಸೇವೆಗಳಂತಹ ಅಪ್ಲಿಕೇಶನ್‌ಗಳು ನಿಮ್ಮ ವೈಯಕ್ತಿಕ ಡೇಟಾವನ್ನು ಹೇಗೆ ಸಂಗ್ರಹಿಸಬೇಕು ಮತ್ತು ನಿರ್ವಹಿಸಬೇಕು ಎಂಬುದರ ಕುರಿತು ಈ ಕಾನೂನನ್ನು ರೂಪಿಸಲಾಗಿದೆ. ಒಪ್ಪಿಗೆ–ಮೊದಲು ತತ್ತ್ವದಲ್ಲಿ ಹೊಸ ಡಿಪಿಡಿಪಿ ನಿಯಮಗಳು, ಡಿಜಿಟಲ್ ನೆಲಕ್ಕೆ ಕಾಲಿಡುವ ಎಲ್ಲರಿಗೂ ಅನ್ವಯವಾಗುತ್ತವೆ. ನಿಯಮ ತಪ್ಪಿದರೆ ದಂಡ ಸೇರಿದಂತೆ ಬಳಕೆದಾರರಿಗೆ ಇವು ಹೆಚ್ಚಿನ ಪ್ರಾಧಾನ್ಯತೆ ನೀಡಿವೆ.

**ಡಿಜಿಟಲ್ ವೇದಿಕೆಗಳ ಹೊಸ ಅವಶ್ಯಕತೆಗಳು:** ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ವೇದಿಕೆಗಳು ದತ್ತಾಂಶವನ್ನು ಸಂಗ್ರಹಿಸುವ ಮೊದಲು ಬಳಕೆದಾರರ ಸ್ಪಷ್ಟ ಮತ್ತು ದಾಖಲಿತ ಒಪ್ಪಿಗೆ ಪಡೆಯಬೇಕು. ಬಳಕೆದಾರರು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ, ಡಿಜಿಟಲ್ ವೇದಿಕೆಗಳು ಪ್ರವೇಶ ನೀಡುವ ಮೊದಲು ಪೋಷಕರ ಅನುಮೋದನೆ ಪರಿಶೀಲಿಸಬೇಕು. ಹೆಚ್ಚುವರಿ ನಿಯಮಗಳಿಗೆ ಕಂಪನಿಗಳು ಗೂಢಲಿಪೀಕರಣ (ಇನ್‌ಕ್ರಿಪ್ಟ್) ಮತ್ತು ಇತರ ಭದ್ರತಾ ವಿಧಾನಗಳನ್ನು ಬಳಸಬೇಕಾಗುತ್ತದೆ. ನಿಮ್ಮ ಮಾಹಿತಿಯ ಪ್ರತಿಯೊಂದು ಪ್ರವೇಶವನ್ನು ಲಾಗ್ ಮಾಡಬೇಕು. ಟ್ರ್ಯಾಕ್ ಮಾಡಬೇಕು ಮತ್ತು ಕನಿಷ್ಠ ಒಂದು ವರ್ಷದವರೆಗೆ ಸುರಕ್ಷಿತವಾಗಿ ಸಂಗ್ರಹಿಸಬೇಕು. ಮೂರನೇ ವ್ಯಕ್ತಿಯ ಪ್ರೊಸೆಸರ್ ಬಳಕೆಯಾಗಿದ್ದರೆ, ಅವರು ಆದೇ ಭದ್ರತಾ ಮಾನದಂಡಗಳನ್ನು ಕಾಪಾಡಿಕೊಳ್ಳಲು ಬದ್ಧರಾಗಿರಬೇಕಾಗುತ್ತದೆ

**ದತ್ತಾಂಶ ವರ್ಗಾವಣೆಯ ಮಿತಿಗಳು:** ಸರ್ಕಾರ, ವಿನಾಯಿತಿ ನೀಡದ ಹೊರತು ಕೆಲವು ವೈಯಕ್ತಿಕ ದತ್ತಾಂಶ ಮತ್ತು ಸಂಬಂಧಿತ ದಾಖಲೆಗಳನ್ನು ಭಾರತದ ಹೊರಗೆ ಕಳುಹಿಸುವುದನ್ನು ಕಾನೂನು ನಿರ್ಬಂಧಿಸುತ್ತದೆ. ಇದರರ್ಥ ಜಾಗತಿಕ ತಂತ್ರಜ್ಞಾನ ಕಂಪನಿಗಳು ಮೊದಲಿಗಿಂತ ಹೆಚ್ಚು ಡೇಟಾವನ್ನು ಸ್ಥಳೀಯವಾಗಿಯೇ ಸಂಗ್ರಹಿಸಬೇಕಾಗುತ್ತದೆ. ಈ ನೀತಿಯ ಅಡಿಯಲ್ಲಿ ಯಾವ ರೀತಿಯ ದತ್ತಾಂಶಗಳು ಬರುತ್ತವೆ ಎಂಬುದರ ಕುರಿತು ನಿರ್ದಿಷ್ಟ ನಿಯಮಗಳನ್ನು ಸರ್ಕಾರಿ ಸಮಿತಿ ವ್ಯಾಖ್ಯಾನಿಸುತ್ತದೆ.

**ಬಳಕೆದಾರರಾಗಿ ನಿಮ್ಮ ಹಕ್ಕುಗಳೇನು?:** ನೀವು ಯಾವುದೇ ಸಮಯದಲ್ಲಿ ನಿಮ್ಮ ವೈಯಕ್ತಿಕ ಡೇಟಾವನ್ನು ವೀಕ್ಷಿಸಬಹುದು, ಸರಿಪಡಿಸಬಹುದು, ನವೀಕರಿಸಬಹುದು ಅಥವಾ ಅಳಿಸಬಹುದು. ಅಲ್ಲದೆ ಈ ವಿನಂತಿಗಳನ್ನು ನಿರ್ವಹಿಸಲು ಬೇರೊಬ್ಬರನ್ನು ನೇಮಿಸಬಹುದು. ಕಂಪನಿಗಳು 90 ದಿನಗಳಲ್ಲಿ ಅಥವಾ ಅದಕ್ಕಿಂತ ಕಡಿಮೆ ಅವಧಿಯಲ್ಲಿ ನಿಮ್ಮ ಪ್ರಶ್ನೆಗೆ ಪ್ರತಿಕ್ರಿಯಿಸಬೇಕು ಮತ್ತು ನಿಮ್ಮ ದತ್ತಾಂಶದ ಬಗ್ಗೆ ಸ್ಪಷ್ಟ ಸಂಪರ್ಕ ಮಾಹಿತಿ ಪ್ರದರ್ಶಿಸಬೇಕು. ದೊಡ್ಡ ತಂತ್ರಜ್ಞಾನ ಸಂಸ್ಥೆಗಳಂತೆ, ಮಹತ್ವದ ದತ್ತಾಂಶ ನಿರ್ವಹಣಾ ಸಂಸ್ಥೆಗಳು ವಾರ್ಷಿಕ ಲೆಕ್ಕಪರಿಶೋಧನೆ ಮತ್ತು ಕಟ್ಟುನಿಟ್ಟಾಗಿ ಅಪಾಯದ ಮೌಲ್ಯಮಾಪನಗಳಂತಹ ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ.

**ಅಪ್ರಾಪ್ತರಿಗೆ ಬಲವಾದ ಸುರಕ್ಷೆ:** ಈ ನಿಯಮದ ಪ್ರಕಾರ, ವಿಶೇಷ ನಿಬಂಧನೆಗಳು ಮಕ್ಕಳ ದತ್ತಾಂಶವನ್ನು ರಕ್ಷಿಸಲಿವೆ. ಅವರ ದಾಖಲೆಯನ್ನು ಬಳಸಿಕೊಳ್ಳಲು ಪೋಷಕರ ಒಪ್ಪಿಗೆ ಅತ್ಯಗತ್ಯ ಮತ್ತು ಕಾನೂನು ಬದ್ಧವಾಗಿ ವಯಸ್ಕರಿಂದಲೇ ಪೋಷಕರ ಅನುಮೋದನೆ ಬರುತ್ತದೆ ಎಂಬುದನ್ನು ವೇದಿಕೆಗಳು ಎರಡು ಬಾರಿ ಪರಿಶೀಲಿಸಬೇಕು. ತಾವೇ ಒಪ್ಪಿಗೆ ನೀಡಲು ಸಾಧ್ಯವಾಗದಿದ್ದರೆ, ಅವರ ಪೋಷಕರು ಈ ಅನುಮತಿಯನ್ನು ಒದಗಿಸಬೇಕು. ಇವೆಲ್ಲವೂ ಕಟ್ಟುನಿಟ್ಟಾದ ಪರಿಶೀಲನಾ ನಿಯಮಗಳಲ್ಲಿ ಬರುತ್ತವೆ.

**ದೂರಿಗೆ ಸ್ಪಂದಿಸದಿದ್ದರೆ 250ಕೋಟಿ ರೂ. ದಂಡ:** ಬಳಕೆದಾರರ ದೂರುಗಳನ್ನು ಪರಿಹರಿಸಲು ಮತ್ತು ಮೇಲ್ಮನವಿಗಳನ್ನು ನಿರ್ವಹಿಸಲು ಕಾನೂನು ಹೊಸ ದತ್ತಾಂಶ ಸಂರಕ್ಷಣಾ ಮಂಡಳಿಯನ್ನು ಪರಿಚಯಿಸಿದೆ. ತೊಂದರೆಗೊಳಗಾದ ಬಳಕೆದಾರರು ಡೇಟಾ ಉಲ್ಲಂಘನೆಯ ಬಗ್ಗೆ ತಿಳಿಸಿದ ತಕ್ಷಣವೇ, ಸಂಸ್ಥೆಯಾದರೆ 72 ಗಂಟೆಗಳ ಒಳಗೆ ಪ್ರತಿಕ್ರಿಯಿಸಬೇಕು. ಇದನ್ನು ಪಾಲಿಸದಿದ್ದರೆ 250 ಕೋಟಿ ರೂ. ದಂಡ ವಿಧಿಸಬಹುದು. ದೊಡ್ಡ ಸಂಸ್ಥೆಗಳು ಸಂಪೂರ್ಣ ಪ್ರಕ್ರಿಯೆ ಮುಗಿಸಲು 18 ತಿಂಗಳ ಅವಧಿ ಹೊಂದಿರುತ್ತವೆ.

## ಛತ್ತೀಸಗಢ: 2 ವರ್ಷಗಳಲ್ಲಿ ಎರಡು ಸಾವಿರ ನಕ್ಸಲರು ಶರಣು

ಶರಣಾಗತ ನಕಲರಿಗಾಗಿಯೇ ಸರ್ಕಾರ ಜಾರಿಗೊಳಿಸಿರುವ ಪುನರ್ವಸತಿ ನೀತಿ ನಿರ್ಣಾಯಕ ಪಾತ್ರ ವಹಿಸಿದೆ. ಕಳೆದ ಎರಡು ವರ್ಷಗಳಲ್ಲಿ ಬರೋಬ್ಬರಿ 2 ಸಾವಿರ ನಕ್ಸಲರು ಶಸ್ತ್ರತ್ಯಜಿಸಿ ಶರಣಾಗಿದ್ದಾರೆ. ಛತ್ತೀಸ್‌ಗಢದಲ್ಲಿ ನಕ್ಸಲ್ ಪಿಡುಗು ವಿನಾಶದ ಅಂಚಲ್ಲಿದೆ ಎಂದು ಛತ್ತೀಸಗಢ ಮುಖ್ಯಮಂತ್ರಿ ವಿಷ್ಣುದೇವೋ ಸಾಯಿ ಹೇಳಿದ್ದಾರೆ. 2026ರ ಮಾ.31ರ ವೇಳೆ ನಕ್ಸಲ್ ಪಿಡುಗನ್ನು ಭಾರತದಿಂದ ಸಂಪೂರ್ಣವಾಗಿ ತೊಲಗಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ದೃಢ ಸಂಕಲ್ಪ ತೊಟ್ಟಿದ್ದಾರೆ. ಬಸ್ತಾರ್ ವಲಯದಲ್ಲಿ ನಕ್ಸಲ್ ಪಿಡುಗು ನಿರ್ಮೂಲನೆಯಾದ ಕ್ಷಣದಿಂದಲೇ ವಲಯವು ತ್ವರಿತ ಅಭಿವೃದ್ಧಿಗೆ ಸಾಕ್ಷಿಯಾಗಲಿದೆ ಎಂದು ಮುಖ್ಯಮಂತ್ರಿ ಸಾಯಿ ವಿಶ್ವಾಸ ವ್ಯಕ್ತಪಡಿಸಿದರು. ನಕ್ಸಲ್ ಪಿಡುಗು ಕೊನೆಯುಸಿರೆಳೆಯೋ ಘಟ್ಟದಲ್ಲಿದೆ. ಇದಕ್ಕೆ ನಿದರ್ಶನವೆಂಬಂತೆ ಅಪಾರ ಸಂಖ್ಯೆಯಲ್ಲಿ ನಕ್ಸಲರು ಶಸ್ತ್ರತ್ಯಜಿಸಿ ಶರಣಾಗತರಾಗುತ್ತಿದ್ದಾರೆ. ಶಸ್ತ್ರತ್ಯಜಿಸಿದ ನಕ್ಸಲರಿಗೆ ಸರಕಾರ ಉದ್ಯೋಗಾಧಾರಿತ ಕೌಶಲ ಅಭಿವೃದ್ಧಿ ತರಬೇತಿಯನ್ನು ನೀಡುತ್ತಿದೆ ಮತ್ತು ತರಬೇತಿ ಅವಧಿಯಲ್ಲಿ ಮಾಸಿಕ 10ಸಾವಿರ ರೂ. ಹಣಕಾಸು ನೆರವೀಯುತ್ತಿದೆ. ಛತ್ತೀಸ್‌ಗಢದಲ್ಲಿ ನಕ್ಸಲ್ ಹಾವಳಿ ತೀವ್ರವಾಗಿತ್ತು. ಆದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರಯತ್ನಗಳಿಗೆ ಹೆಗಲು ನೀಡಿರುವ ನಮ್ಮ ಭದ್ರತಾ ಪಡೆಗಳು ನಕ್ಸಲ್ ಪಿಡುಗಿನ ವಿರುದ್ಧ ನಿರಂತರ ಹೋರಾಡುತ್ತಿದ್ದಾರೆ




## ಶಬರಿಮಲೆ ಭಕ್ತರಿಗೆ ಆರೋಗ್ಯ ಮಾರ್ಗಸೂಚಿ

ನವೆಂಬರ್ 17ರಿಂದ ಕೇರಳದ ಶಬರಿಮಲೆಯಲ್ಲಿ ವಾರ್ಷಿಕ ತೀರ್ಥಯಾತ್ರೆಯ ಋತು ಆರಂಭಗೊಂಡಿದೆ. ಇದರ ಬೆನ್ನಲ್ಲೇ ಅಲ್ಲಿನ ಸರ್ಕಾರ ಭೇಟಿ ನೀಡುವ ಭಕ್ತರಿಗೆ ಆರೋಗ್ಯ ಸಂಬಂಧ ಕೆಲವೊಂದು ಸಲಹೆ ನೀಡಿದೆ. ಜತೆಗೆ, ನದಿಯಲ್ಲಿ ಸ್ನಾನ ಮಾಡುವಾಗ ಮೂಗಿನೊಳಗೆ ನೀರು ಹೋಗದಂತೆ ನೋಡಿಕೊಳ್ಳಿ ಎಂದೂ ಸೂಚಿಸಿದೆ. ಸದ್ಯ ಕೇರಳದಲ್ಲಿ ಅಮೀಬಿಕ್ ಮೆನಿಂಗೋಎನ್ಸೆಫಾಲಿಟಿಸ್ (ಮೆದುಳಿನ ಜ್ವರ) ಪ್ರಕರಣಗಳು ವರದಿಯಾಗಿದ್ದು, ಹೀಗಾಗಿ, ಭಕ್ತರು ಎಚ್ಚರಿಕೆಯಿಂದ ಇರಬೇಕು. ವೈದ್ಯಕೀಯ ಚಿಕಿತ್ಸೆಯಲ್ಲಿರುವ ಯಾತ್ರಾರ್ಥಿಗಳು ತಮ್ಮ ದಾಖಲೆಗಳು ಮತ್ತು ಔಷಧಗಳನ್ನು ಕೊಂಡೊಯ್ಯಬೇಕು. ತೀರ್ಥಯಾತ್ರೆಗೆ ತಯಾರಿ ನಡೆಸುವಾಗ ನಿಯಮಿತ ಔಷಧಗಳನ್ನು ನಿಲ್ಲಿಸಬಾರದು ಎಂದು ಹೇಳಿದೆ.



ಯಾತ್ರಾರ್ಥಿಗಳು ಆಯಾಸ, ಎದೆ ನೋವು, ಉಸಿರಾಟದ ತೊಂದರೆ ಅನುಭವಿಸಿದರೆ ನಿಧಾನವಾಗಿ ಹತ್ತಲು, ವಿರಾಮ ತೆಗೆದುಕೊಳ್ಳಲು ಮತ್ತು ವೈದ್ಯಕೀಯ ಸಹಾಯ ಪಡೆಯಲು ಸೂಚಿಸಲಾಗಿದೆ. ಈ ಕುರಿತಂತೆ ಕನ್ನಡ ಸೇರಿ ಇತರ ಭಾಷೆಗಳಲ್ಲೂ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ.

## ಬ್ರಹ್ಮೋಸ್ ಖರೀದಿಗೆ ಇಂಡೋನೇಷ್ಯಾ ಆಸಕ್ತಿ

ಬ್ರಹ್ಮೋಸ್ ಸೂಪರ್ ಸೋನಿಕ್ ಕ್ರೂಸ್ ಕ್ಷಿಪಣಿಯನ್ನು ಖರೀದಿಸಲು ಇಂಡೋನೇಷ್ಯಾ ಆಸಕ್ತಿ ವ್ಯಕ್ತಪಡಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಲಖನೌನಲ್ಲಿ ತಯಾರಾಗುತ್ತಿರುವ ಸೋನಿಕ್ ಕ್ಷಿಪಣಿಯನ್ನು ಖರೀದಿಸಲು ಜಕಾರ್ತಾ ಬಿಡ್ ಮಾಡಿದೆ ಎಂದು ಹೇಳಿದ್ದಾರೆ. ರಾಜನಾಥ್ ಸಿಂಗ್ ಮತ್ತು ಉತ್ತರ ಪ್ರದೇಶದ




ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಅಕ್ಟೋಬರ್ 18 ರಂದು ಲಖನೌನಲ್ಲಿ ಹೊಸದಾಗಿ ಕಾರ್ಯನಿರ್ವಹಿಸುತ್ತಿರುವ ಬ್ರಹ್ಮೋಸ್ ಏರೋಸ್ಪೇಸ್ ಏಕೀಕರಣ ಮತ್ತು ಪರೀಕ್ಷಾ ಸೌಲಭ್ಯದಲ್ಲಿ ತಯಾರಿಸಿದ ಬ್ರಹ್ಮೋಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ಗೆ ಹಸಿರು ನಿಶಾನೆ ತೋರಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. 300 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿ, ಮೇ 11ರಂದು ಉದ್ಘಾಟಿಸಲಾದ ಅತ್ಯಾಧುನಿಕ ಸೌಲಭ್ಯವು ಈಗ ಸಂಪೂರ್ಣವಾಗಿ ಕಾರ್ಯಾರಂಭಗೊಂಡಿದೆ. ಸರೋಜಿನಿ ನಗರದ ಭಟ್ಗಾಂವ್‌ನಲ್ಲಿರುವ ಈ ಘಟಕವು ಉತ್ತರ ಪ್ರದೇಶದ ರಕ್ಷಣಾ ಕಾರಿಡಾರ್‌ನ ಅತ್ಯಂತ ಮಹತ್ವದ ಯೋಜನೆಗಳಲ್ಲಿ ಒಂದಾಗಿದೆ. ಅಧಿಕಾರಿಗಳ ಪ್ರಕಾರ, ಕ್ಷಿಪಣಿಗಳ ಜೋಡಣೆ, ಏಕೀಕರಣ ಮತ್ತು ಪರೀಕ್ಷೆಯನ್ನು ಹೈಟೆಕ್ ಮಾನದಂಡಗಳನ್ನು ಬಳಸಿಕೊಂಡು ನಡೆಸಲಾಗುತ್ತಿದೆ. ಉತ್ತರಪ್ರದೇಶ ಸರ್ಕಾರವು ಈ ಯೋಜನೆಗಾಗಿ 80 ಹೆಕ್ಟೇರ್ ಭೂಮಿಯನ್ನು ಉಚಿತವಾಗಿ ನೀಡಿದೆ.

## 2028ಕ್ಕೆ ಚಂದ್ರಯಾನ 4 ಉಡಾವಣೆ ಗುರಿ: ಇಸ್ರೋ

ಮುಂದಿನ ವರ್ಷಾಂತ್ಯಕ್ಕೆ ವಾಣಿಜ್ಯ ಸಂವಹನ ಉಪಗ್ರಹ ಮತ್ತು ಬಹು ಪಿಎಸ್‌ಎಲ್‌ವಿ, ಜಿಎಸ್‌ಎಲ್‌ವಿ ರಾಕೆಟ್‌ಗಳ ಮೂಲಕ ಏಳು ಉಪಗ್ರಹಗಳನ್ನು ಇಸ್ರೋ ಉಡಾವಣೆ ಮಾಡುವ ಗುರಿ ಹೊಂದಿದೆ ಎಂದು ಅಧ್ಯಕ್ಷ ವಿ ನಾರಾಯಣನ್ ಹೇಳಿದರು. ಅದೇ ರೀತಿ ನಾವು 2028ಕ್ಕೆ ಚಂದ್ರಯಾನ 4 ಉಡಾವಣೆ ಮಾಡುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದ್ದಾರೆ. ಚಂದ್ರನ ಮಾದರಿ ಸಂಗ್ರಹಿಸಿ ತರುವ ಮಿಷನ್ ಆಗಿರುವ ಚಂದ್ರಯಾನ 4 ಅನ್ನು ಸರ್ಕಾರ ಅನುಮೋದಿಸಿದೆ. ಇದು ಭಾರತದ ಅತ್ಯಂತ ಸಂಕೀರ್ಣವಾದ ಪ್ರಯತ್ನವಾಗಿದೆ ಎಂದರು. ನಾವು ಚಂದ್ರಯಾನ–4 ಗಾಗಿ 2028ರ ಗುರಿಯನ್ನು ಹೊಂದಿದ್ದೇವೆ. ಜತೆಗೆ ಮತ್ತೊಂದು ಪ್ರಮುಖ ಕಾರ್ಯಾಚರಣೆಯೆಂದರೆ ಲೂಪೆಕ್ಸ್, ಇದು ಜಾಕ್ಸಾ (ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಶನ್ ಏಜೆನ್ಸಿ) ಯೊಂದಿಗೆ ಜಂಟಿ ಚಂದ್ರನ ಧ್ರುವ ಪರಿಶೋಧನೆ ಕಾರ್ಯಕ್ರಮವಾಗಿದೆ. ಮಿಷನ್ ಬೇಡಿಕೆಯನ್ನು ಹೆಚ್ಚಿಸಲು ಮುಂದಿನ ಮೂರು ವರ್ಷಗಳಲ್ಲಿ ತನ್ನ ವಾರ್ಷಿಕ ಬಾಹ್ಯಾಕಾಶ ನೌಕೆಯ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸಲು ಇಸ್ರೋ ಏಕಕಾಲದಲ್ಲಿ ಕೆಲಸ ಮಾಡುತ್ತಿದೆ. ಚಂದ್ರಯಾನ–4 ಚಂದ್ರನಿಂದ ಮಾದರಿಗಳನ್ನು ಮರಳಿ ತರಲು ಪ್ರಯತ್ನಿಸುತ್ತದೆ. ಲೂಪೆಕ್ಸ್ ಚಂದ್ರನ ದಕ್ಷಿಣ ಧ್ರುವದಲ್ಲಿ ನೀರಿನ ಮಂಜುಗಡ್ಡೆಯನ್ನು ಅಧ್ಯಯನ ಮಾಡುವ ಗುರಿಯನ್ನು ಹೊಂದಿದೆ. 2035ರ ವೇಳೆಗೆ ಪೂರ್ಣಗೊಳ್ಳುವ ಗುರಿಯನ್ನು ಹೊಂದಿರುವ ಭಾರತೀಯ ಬಾಹ್ಯಾಕಾಶ ನಿಲ್ದಾಣದ ಕೆಲಸವನ್ನು ಇಸ್ರೋ ಪ್ರಾರಂಭಿಸಿದೆ ಎಂದು ನಾರಾಯಣನ್ ಹೇಳಿದರು.